ರಸ್ತೆಗಳಿಗೆ 37.68 ಲಕ್ಷ ರೂಗಳನ್ನು ಖರ್ಚು ಮಾಡಲಾಗಿದೆ.

ಆ) 1. ಬೀರೂರು ಅಜ್ಜಂಪುರ ರಸ್ತೆಯಿಂದ ಬೀರೂರು ಲಿಂಗದಹಳ್ಳಿ ಸೇರುವ ರಸ್ತೆ-30 ಲಕ್ಷ ರೂ

2. ಅಜ್ಜಂಪುರ ಬುಕ್ಕಾಂಬುಧಿ ರಸ್ತೆಯಿಂದ ಹುಣಸೆಘಟ್ಟ ಸೇರುವ ರಸ್ತೆ-28.1 ಲಕ್ಷ ರೂ

3. ತರೀಕೆರೆ ಹೊಸದುರ್ಗ ರಸ್ತೆ-12.1ಲಕ್ಷ ರೂ

4. ಕಲ್ಲೇನಹಳ್ಳಿಯಿಂದ ಹಾರೆಕೆರೆ ಬೀರೂರು ಶಿವನಿ ಸೇರುವ ರಸ್ತೆ-23 ಲಕ್ಷ ರೂ

5. ತರೀಕೆರೆ ಹಾದಿಕೆರೆ ನೇರಳಕೆರೆ ರಸ್ತೆ-11.92 ಲಕ್ಷ ರೂ

6. ಅಜ್ಜಂಪುರ ಕಣಬಗಟೆಯಿಂದ ಶಿವನಿ ಬುಕ್ಕಾಂಬುಧಿ ಸೇರುವ ರಸ್ತೆ-29.1ಲಕ್ಷ ರೂ

ಇ) ಯಾವ ಕಾಮಗಾರಿಯೂ ಮುಗಿದಿರುವುದಿಲ್ಲ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದೆ.

ಈ) ಈ ಎಲ್ಲಾ ಕಾಮಗಾರಿಗಳನ್ನು ಮಾರ್ಚ್ 2001ರ ಅಂತ್ಯದೊಳಗೆ ಮುಗಿಸಲಾಗುವುದು.

ಕೊಳ್ಳೆಗಾಲ ತಾಲ್ಲೂಕಿನ ಶಿವನ ಸಮುದ್ರ ಅಭಿವೃದ್ಧಿ ಬಗ್ಗೆ

1726 (2406) ಶ್ರೀ ನಂಜುಂಡ ಸ್ವಾಮಿ ಜಿ.ಎನ್. (ಕೊಳ್ಳೆಗಾಲ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಆ) ಕೊಳ್ಳೆಗಾಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಭರಚುಕ್ಕಿ ಹಾಗೂ ಗಗನಚುಕ್ಕಿ ಮತ್ತು ಶಿವನಸಮುದ್ರ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು;

ಬ) ಈ ಪ್ರದೇಶವನ್ನು ಅಧಿಕೃತವಾಗಿ ಪ್ರವಾಸ ಸ್ಥಳವನ್ನಾಗಿ ಸರ್ಕಾರ ಘೋಷಿಸಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು).

ಆ) ಶಿವನಸಮುದ್ರದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ರಸ್ತೆಬದಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ ಹಾಗೂ ಶಿವನಸಮುದ್ರದ ದರ್ಗಾದ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಬ) ಘೋಷಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಬೆಳ್ತಂಗಡಿ ತಾಲ್ಲೂಕಿನ ಲೋಕೋಪಯೋಗಿ ಇಲಾಖಾ ರಸ್ತೆಗಳ ಬಗ್ಗೆ

1727 (21293) ಶ್ರೀ ಪ್ರಭಾಕರ ಬಂಗೇರ.ಕೆ. (ಬೆಳ್ತಂಗಡಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಿಟ್ಟು ಉತ್ತರಿಸುವರೆ?

ಆ) ಬೆಳ್ತಂಗಡಿ ತಾಲ್ಲೂಕಿನ ಕಕ್ಕಂಜಿ, ಆಣೆಯೂರು, ದೇವಗಿರಿ ಮೂಡುಗೆರೆ ಮಾರ್ಗದ

ಅಭಿವೃದ್ಧಿ ಮಾಡುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೆ; ಹೌದಾದಲ್ಲಿ ಯಾವಾಗ ಅದನ್ನು ಕಾರ್ಯಗತ ಮಾಡಲಾಗುವುದು;

ಆ) ಶೃಂಗೇರಿ, ಕಳಸ, ಧರ್ಮಸ್ಥಳ, ಸುಬ್ರಹ್ಮಣ್ಯ ಕ್ಷೇತ್ರಗಳಿಗೆ ಸಂಚಾರಕ್ಕೆ ಅನುಕೂಲವಾಗುವ ಸಂಪರ್ಕ ರಸ್ತೆಯಾಗಿ (ಲಿಂಕ್ ರೋಡ್) ಸೋಮಂಡಡ್ಕ, ದಿಡ್ಪೆ, ಎಳನೀರು, ಸಂಸೆ ರಸ್ತೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದವರು ಯೋಜನೆಯನ್ನು ರೂಪಿಸಿರುವರೆ; ಹೌದಾದಲ್ಲಿ ಅದರ ವಿವರ ಒದಗಿಸುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಆ) ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು, ಸರ್ಕಾರವು ಸಧ್ಯಕ್ಕೆ ಯಾವುದೇ ಯೋಜನೆ ರೂಪಿಸಿರುವುದಿಲ್ಲ, ಆದಾಗ್ಯೂ ವಾರ್ಷಿಕ ನಿರ್ವಹಣೆಯ ಅನುದಾನದಲ್ಲಿ ರಸ್ತೆಯನ್ನು ದುರಸ್ತಿ ಮಾಡಲಾಗುವುದು.

ಆ) ಸದರಿ ರಸ್ತೆಯ ಭಾಗದ ಅಭಿವೃದ್ಧಿಗಾಗಿ, ಸರ್ಕಾರವು ಸಧ್ಯಕ್ಕೆ ಯಾವುದೇ ಯೋಜನೆ ರೂಪಿಸಿಲ್ಲ, ಆದಾಗ್ಯೂ ವಾರ್ಷಿಕ ನಿರ್ವಹಣೆಯ ಅನುದಾನದಲ್ಲಿ ರಸ್ತೆಯನ್ನು ದುರಸ್ತಿ ಮಾಡಲಾಗುವುದು.

ಗುರುವಾಯನ ಕೆರೆಯ ದೊಡ್ಡಕೆರೆ ಕಾಡು ಬಗ್ಗೆ

1728 (2392) ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಬೆಳ್ತಂಗಡಿ ತಾಲ್ಲೂಕಿನ ಗುರುವಾಯನಕೆರೆ ಪ್ರದೇಶದಲ್ಲಿರುವ ದೊಡ್ಡಕೆರೆ ಹತ್ತಿರವಿರುವ ಕಾಡನ್ನು ಹಿಂದೆ ಇದ್ದ ಪ್ರಸ್ತಾವನೆಯಂತೆ ಅರಣ್ಯ ಇಲಾಖೆಯವರು ಸ್ವಾಧೀನಪಡಿಸಿಕೊಂಡು ಪಕ್ಷಿಧಾಮವಾಗಿ ಘೋಷಿಸುವ ಕುರಿತು ಇಲಾಖೆಯವರು ಜರುಗಿಸಿದ ಕ್ರಮಗಳೇನು;

ಆ) ಈ ಕೆರೆಯನ್ನು ಪ್ರಕೃತಿ ವೀಕ್ಷಣ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಿ ಪ್ರವಾಸಿಕೇಂದ್ರವನ್ನಾಗಿ ಮಾಡಲು ಸರಕಾರದವರು ಸಕಾಲಿಕ ಕ್ರಮವನ್ನು ಕೈಗೊಳ್ಳುವರೇ;

ಇ) ಈ ಕೆರೆಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿರುವ ಹಾಗೂ ವಲಸೆ ಬರುತ್ತಿರುವ ಪಕ್ಷಿ ಸಂಕುಲಗಳನ್ನು ಇಲಾಖೆಯು ಗುರುತಿಸಿದೆಯೇ; ಗುರುತಿಸಿದ್ದಲ್ಲಿ ಅವುಗಳು ಯಾವುವು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು).

ಆ) ಸರ್ಕಾರದಲ್ಲಿ ಪ್ರಸ್ತಾವನೆ ಇಲ್ಲ.